# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-1426/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 19/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಭರತ್ ದಾದು ಕಟ್ಟಿ, ಅಂಬೈ ಪ್ಲಾಟ್, ಶಿವಾಜಿನಗರ, ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಭರತ್ ದಾದು ಕಟ್ಟಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ನಗರದ ಶಿವಾಜಿ ನಗರ ಬಡಾವಣೆಯ ಸರ್ವೇ ನಂಬರ್ 50ಎ/11ರಲ್ಲಿ 55 x 40 ಅಡಿ ವಿಸ್ತೀರ್ಣದ ಜಾಗವನ್ನು ಶ್ರೀ ವಿಕ್ರಮ ಭೀಮರಾವ್ ಕದಂ ಮತ್ತು ಶ್ರೀ ಅವಿನಾಶ್ ಲಕ್ಷ್ಮಣ್ ಕಟ್ಟಿ ಇವರಿಬ್ಬರೂ ಕೂಡಿ ಖರೀದಿಸಿ ಅದರಲ್ಲಿ ಮನೆಯನ್ನು ಕಟ್ಟಿ ವಾಸವಾಗಿರುತ್ತಾರೆ. ತಾವು ಖರೀದಿಸಿದ ಜಾಗದಲ್ಲಿ ಉಳಿದಿದ್ದ 16 x 40 ಅಡಿ ವಿಸ್ತೀರ್ಣದ ಜಾಗವನ್ನು ಶ್ರೀ ಮಹೇಶ್ ಪಾಂಡುರಂಗ ದಳವಿ ಮತ್ತು ಶ್ರೀ ಉಮೇಶ್ ಪಾಂಡುರಂಗ ದಳವಿ ಎಂಬುವವರಿಗೆ ಮಾರಾಟ ಮಾಡಿರುತಾರೆ. ಸದರಿ ಶ್ರೀ ಮಹೇಶ್ ಮತ್ತು ಉಮೇಶ್ ರವರುಗಳಿಗೆ ತಾವು ಖರೀದಿಸಿದ್ದ ಜಾಗವು ಗ್ರೀನ್ ಬೆಲ್ಟ್ ಏರಿಯಾ ದಲ್ಲಿ ಬರುತ್ತದೆ ಎಂದು ಗೊತ್ತಿದ್ದರೂ ಸಹ ನಿಪ್ಪಾಣಿ ಪುರಸಭೆಗೆ ತಪ್ಪು ಮಾಹಿತಿ ನೀಡಿ ಕಟ್ಟಡ ಕಟ್ಟಲು ಲೈಸನ್ಸ್ ಪಡೆದುಕೊಂಡಿರುತ್ತಾರೆ. ಸದರಿ ಕಟ್ಟಡ ರಾಷ್ಟ್ರೀಯ ಹೆದ್ದಾರಿಯಿಂದ 75.00 ಮೀ., ಒಳಗೆ ಇರುತ್ತದೆ. ಈ ಬಗ್ಗೆ ದೂರುದಾರರು ಪುರಸಭೆಯ ಗಮನಕ್ಕೆ ತಂದಿದ್ದು, ಸದರಿಯವರ ಲೈಸೆನ್ಸ್ ರದ್ದುಗೊಳಿಸಲಾಗಿರುತ್ತದೆ. ಆದರೂ ಸಹ ಸದರಿ ಶ್ರೀ ಮಹೇಶ್ ಹಾಗೂ ಶ್ರೀ ಉಮೇಶ್ ರವರು ಕಟ್ಟಿರುವ ಕಟ್ಟಡವನ್ನು ತೆರವುಗೊಳಿಸಲು ಎದುರುದಾರರುಗಳು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನನ್ವಯ ಎದುರುದಾರರಿಂದ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರುಗಳು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಮಹೇಶ್ ಹಾಗೂ ಶ್ರೀ ಉಮೇಶ್ ರವರಿಗೆ ದಿ:03/09/2014 ರಂದು ಮನೆಯನ್ನು ಸರ್ವೆ ನಂ.50ಎ/11 ರ 16 x 40 ಅಡಿ ಜಾಗದಲ್ಲಿ ಮನೆ ಕಟ್ಟಲು ನಗರ ಯೋಜನಾ ಪ್ರಾಧಿಕಾರದ ಕಾರ್ಯದರ್ಶಿಯವರು ಕೊಟ್ಟ ಅಭಿಪ್ರಾಯದ ಮೇರೆಗೆ ಲೈಸನ್ಸ್ ಅನ್ನು ನೀಡಲಾಗಿರುತ್ತದೆ. ಆದರೆ, ಸದರಿ ಶ್ರೀ ಮಹೇಶ್ ಮತ್ತು ಶ್ರೀ ಉಮೇಶ್ ರವರುಗಳು ಮನೆ ಕಟ್ಟುವ ಲೈಸೆನ್ಸ್ ಪಡೆದ ನಂತರ ಕಟ್ಟಡವನ್ನು ಕಟ್ಟಿ ಪೂರ್ಣಗೊಳಿಸಿದ ನಂತರ ನಗರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ನಗರ ಪುರಸಭೆಗೆ ದಿ:12/06/2015 ರಂದು ಸದರಿ ಶ್ರೀ ಮಹೇಶ್ ಮತ್ತು ಶ್ರೀ ಉಮೇಶ್ ರವರು ಕಟ್ಟಿರುವ ಕಟ್ಟಡವು ರಾಷ್ಟ್ರೀಯ ಹೆದ್ದಾರಿ ನಂ.4ರ ಮಧ್ಯ ಬಿಂದುವಿಂದ 75.00 ಮೀ., ಗಳ ಅಂತರದಲ್ಲೇ ಕಟ್ಟಡವನ್ನು ಕಟ್ಟಿರುತ್ತಾರೆ ಎಂದು ಆದ್ದರಿಂದ ಸದರಿಯವರ ಕಟ್ಟಡ ಪರವಾನಗಿಯನ್ನು ರದ್ದುಪಡಿಸಲು ತಿಳಿಸಿರುತ್ತಾರೆ. ಆದರೆ, ಸದರಿಯವರ ಮಾಹಿತಿಯು ಶ್ರೀ ಮಹೇಶ್ ಮತ್ತು ಶ್ರೀ ಉಮೇಶ್ ರವರು ಕಟ್ಟಡ ಕಟ್ಟಿ 10 ತಿಂಗಳ ನಂತರ ತಮ್ಮ ಕಛೇರಿಗೆ ಬಂದಿರುತ್ತದೆ. ಆದ್ದರಿಂದ, ಈಗ ಅಕ್ರಮ ಕಟ್ಟಡ ತೆರವಿಗೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿರುತ್ತಾರೆ.

3. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ನಿಪ್ಪಾಣಿಯ ನಗರ ಯೋಜನಾ ಪ್ರಾಧಿಕಾರದಿಂದ ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿಯನ್ನು ಪಡೆದಿದ್ದು, ಅದರಲ್ಲಿ ರಸ್ತೆಯ ಎರಡು ಬದಿಗೆ ರಾಷ್ಟ್ರೀಯ ಹೆದ್ದಾರಿ ಸಂ:4ರ ಮಧ್ಯ ರೇಖೆಯಿಂದ 75.00 ಮೀ., ಅಂತರದ ಜಾಗವನ್ನು ಹಸಿರು ವಲಯ ಎಂದು ಘೋಷಿಸಲಾಗಿರುತ್ತದೆ ಮತ್ತು ರಸ್ತೆಯ ಎರಡು ಬದಿಗೆ 75.00 ಮೀ., ಅಂತರದವರೆಗೆ ಬಿನ್‌ಶೇತ್ಕಿಗೆ, ವಿನ್ಯಾಸ ಅನುಮೋದನೆಗೆ ಹಾಗೂ ಕಟ್ಟಡ ಕಟ್ಟಲು ಪರವಾನಗೆ ಅನುಮತಿ ನೀಡಬಾರದೆಂದು ಬೆಳಗಾವಿಯ ಜಿಲ್ಲಾಧಿಕಾರಿಗಳು ತಮ್ಮ ಆದೇಶ ಸಂ:ಆರ್‌ಬಿ/ಪಿಡಬ್ಲೂಡಿ/ಸಿಆರ್-173/2002-03 ರಲ್ಲಿ ತಿಳಿಸಿರುವುದು ಕಂಡು ಬರುತ್ತದೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಇದರಿಂದ ರಾಷ್ಟ್ರೀಯ ಹೆದ್ದಾರಿ ಸಂ:4ರ ಮಧ್ಯಭಾಗದ ಬಿಂದುವಿನಿಂದ ರಸ್ತೆಯ ಎರಡು ಬದಿಯಲ್ಲೂ 75.00 ಮೀ., ಒಳಗೆ ಯಾವುದೇ ಕಟ್ಟಡಗಳನ್ನು ಕಟ್ಟಲು ಬರುವುದಿಲ್ಲವೆಂದು ಸ್ಪಷ್ಟ ಪಡುತ್ತದೆ. ಶ್ರೀ ಮಹೇಶ್ ಮತ್ತು ಶ್ರೀ ಉಮೇಶ್ ಇವರುಗಳು ತಾಂತ್ರಿಕ ಮಂಜೂರಾತಿಗಾಗಿ ಕಡತವನ್ನು ಪುರಸಭೆಗೆ ಸಲ್ಲಿಸಿದ್ದು, ಸದರಿಯವರ ಕಡತವನ್ನು ಪರಿಶೀಲಿಸಿ, ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿರುತ್ತದೆ. (ಸದರಿ ಅರ್ಜಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ). ನಂತರ ಸದರಿಯವರು

ಕಟ್ಟಡ ಕಟ್ಟಲು ಪರವಾನಗಿಯನ್ನು ನಿಪ್ಪಾಣಿಯ ಪುರಸಭೆಯ ಆಯುಕ್ತರಿಗೆ ನೀಡಿರುವುದು ಕಂಡು ಬರುತ್ತದೆ. (ಸದರಿ ಕಟ್ಟಡ ಪರವಾನಗಿ ಪ್ರತಿಯನ್ನು ಹಾಜರುಪಡಿಸಲಾಗಿದೆ).

4. ದಿ:24/05/2015 ರಂದು ನಿಪ್ಪಾಣಿ ನಗರ ಸಭೆಯ ಆಯುಕ್ತರು, ಸಹಾಯಕ ನಿರ್ದೇಶಕರು, ಪಟ್ಟಣ ಯೋಜನಾ ಕಛೇರಿ (Town planning Office) ನಿಪ್ಪಾಣಿ ಇವರಿಗೆ ಪತ್ರವನ್ನು ಬರೆದು ಸರ್ವೇ ನಂಬರ್ 50ಎ/11ರಲ್ಲಿ ಇರುವ ಪ್ಲಾಟ್ ನಂ.13 ಕ್ಕೆ ವಿನ್ಯಾಸವನ್ನು ಅನುಮೋದಿಸಿರುತ್ತೀರಿ. ಸದರಿ ಪ್ಲಾಟ್ ನಂ.13 ಗ್ರೀನ್ ಬೆಲ್ಟ್ ಏರಿಯಾದಲ್ಲಿ ಬರುತ್ತದೆ. ಆದರೆ, ತಾವು ಇದಕ್ಕೆ ಕಟ್ಟಡ ಕಟ್ಟಲು ಅನುಮತಿಯನ್ನು ನೀಡಿರುತ್ತೀರಿ, ಯಾವ ಆಧಾರದ ಮೇಲೆ ಅನುಮತಿ ನೀಡಿರುತ್ತೀರಿ ಎಂಬುದರ ಬಗ್ಗೆ ತಿಳಿಸಲು ಸಹಾಯಕ ನಿರ್ದೇಶಕರು, ಪಟ್ಟಣ ಯೋಜನಾ ಕಛೇರಿ (Town planning Office) ನಿಪ್ಪಾಣಿ ಇವರನ್ನು ಕೋರಿ ಪತ್ರ ಬರೆದಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಕಟ್ಟಡದ ವಿನ್ಯಾಸದ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ವಿನ್ಯಾಸದ ಪ್ರತಿಯನ್ನು ಪರಿಶೀಲಿಸಿದಲ್ಲಿ ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ನಿಪ್ಪಾಣಿ ಇವರು ಸದರಿ ಕಟ್ಟಡ ವಿನ್ಯಾಸವನ್ನು ದಿ:26/08/2014 ರಂದು ಅನುಮೋದಿಸಿರುವುದು ಕಂಡು ಬರುತ್ತದೆ. ದಿ:24/05/2015 ರಂದು ನಗರ ಪುರಸಭೆಯ ಆಯುಕ್ತರಿಗೆ ವಲಯ ನಿಯಮಾವಳಿಗಳನ್ನು ಉಲ್ಲಂಘಿಸಿ, ಸದರಿ ಶ್ರೀ ಮಹೇಶ್ ಮತ್ತು ಶ್ರೀ ಉಮೇಶ್ ರವರುಗಳು ಕಟ್ಟಡವನ್ನು ಕಟ್ಟುತ್ತಿರುವುದು, ಅವರ ಗಮನದಲ್ಲಿತ್ತೆಂದು ಮೇಲೆ ಹೇಳಿದ ದಿ:24/05/2015ರ ಸಹಾಯಕ ನಿರ್ದೇಶಕರು, ಪಟ್ಟಣ ಯೋಜನಾ ಕಛೇರಿ (Town planning Office) ನಿಪ್ಪಾಣಿ ಇವರಿಗೆ ಬರೆದಿರುವ ಪತ್ರದಿಂದ ಸ್ಪಷ್ಟ ಪಡುತ್ತದೆ. ಆದಾಗ್ಯೂ ಸಹ ನಗರ ಪುರಸಭಾ ವತಿಯಿಂದ ಯಾವುದೇ ಕ್ರಮ ಜರುಗಿಸದೇ ಇರುವುದು ಸಹ ಕಂಡು ಬರುತ್ತದೆ. ದೂರುದಾರರು ದೂರು ನೀಡಿದ ನಂತರ ನಿಪ್ಪಾಣಿಯ ಪುರಸಭೆಯವರು ಈಗ ಕಾನೂನಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ ಪತ್ರ ಬರೆದಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಆದ್ದರಿಂದ, ನಗರ ಪುರಸಭೆಯ ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ನಿಪ್ಪಾಣಿ ಇವರುಗಳು ಕರ್ತವ್ಯಲೋಪವೆಸಗಿರುವುದು ಕಂಡು ಬರುತ್ತದೆ. ಆದರೆ, ನಗರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ಈ ಪ್ರಕರಣದಲ್ಲಿ ಎದುರುದಾರರಾಗಿರಲಿಲ್ಲ. ಆದ್ದರಿಂದ, ಸದರಿಯವರನ್ನು ಪ್ರಕರಣದಲ್ಲಿ 4ನೇ ಎದುರುದಾರರಾಗಿ ಅಳವಡಿಸಿಕೊಳ್ಳಲು (Implead) ಗೌರವಾನ್ವಿತರ ಆದೇಶ ಪಡೆದುಕೊಂಡು, ಅವರನ್ನು 4ನೇ ಎದುರುದಾರರಾಗಿ ಅಳವಡಿಸಿಕೊಂಡು ಅವರಿಂದ ದೂರಿನಂಶಗಳ ಬಗ್ಗೆ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಸದರಿಯವರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

5. 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಭರತ್ ಡಿ ಕಟ್ಟಿಯವರು ತಮ್ಮ ಕಛೇರಿಗೆ ಅರ್ಜಿ ಸಲ್ಲಿಸಿ ನಿಪ್ಪಾಣಿ ಪಟ್ಟಣದ ಸರ್ವೆ ನಂಬರ್ 50ಅ/11ರಲ್ಲಿನ ನಿವೇಶನ ಸಂಖ್ಯೆ: 13ರ ಜಾಗವು ರಾಷ್ಟ್ರೀಯ ಹೆದ್ದಾರಿಯ ಮಧ್ಯ ರೇಖೆಯಿಂದ 75.0 ಮೀ., ಅಂತರದಲ್ಲಿ ಬರುತ್ತಿದ್ದು, ಸದರಿ ನಿವೇಶನಕ್ಕೆ ನೀಡಿರುವ ಮಂಜೂರಾತಿಯನ್ನು ಕೂಡಲೇ ರದ್ದು ಮಾಡಬೇಕೆಂದು ಕೋರಲಾಗಿದ್ದು, ಸದರಿ ಜಾಗೆ ಮರು ಶೀಲನೆಯನ್ನು ಮಾಡಿದಾಗ ಸದರಿ ಜಾಗವು ರಾಷ್ಟ್ರೀಯ ಹೆದ್ದಾರಿ ನಂ.4 ಕ್ಕೆ ಹೊಂದಿಕೊಂಡಿದ್ದು, ರಾಷ್ಟ್ರೀಯ ಹೆದ್ದಾರಿ ನಿಯಮಾವಳಿ ಪ್ರಕಾರ ರಸ್ತೆ ಮಧ್ಯ ರೇಖೆಯಿಂದ 75.00 ಮೀ., ಅಂತರದೊಳಗೆ ಭಾಗಶ: ಬರುತ್ತಿರುವುದನ್ನು ಗಮನಿಸಿ ಹಾಗೂ ಈ ಹಿಂದೆ ತಾಂತ್ರಿಕ ಅಭಿಪ್ರಾಯ ನೀಡುವ ಸಮಯದಲ್ಲಿ ಬೇರೆ ಕಡೆಗೆ ಸ್ಥಳವನ್ನು ತೋರಿಸಿ ತಪ್ಪು ಮಾಹಿತಿಯನ್ನು ನೀಡಿದ್ದರಿಂದ, ಸದರಿ ನಿವೇಶನಕ್ಕೆ ತಪ್ಪಾಗಿ ಕಟ್ಟಡ ನಿರ್ಮಿಸಲು ತಾಂತ್ರಿಕ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆದ್ದರಿಂದ, ಕಟ್ಟಡ ಪರವಾನಗೆಯನ್ನು ರದ್ದುಪಡಿಸಬೇಕೆಂದು ಕಛೇರಿ ಪತ್ರ ಸಂಖ್ಯೆ: ನಯೋಪ್ರಾನಿ:ಕಟ್ಟಡ ಪರವಾನಿಗೆ:2015–16/30 ದಿನಾಂಕ 12/06/2015 ರ ಪತ್ರವನ್ನು ನಗರಸಭೆ ನಿಪ್ಪಾಣಿ ಇವರಿಗೆ ಬರೆಯಲಾಗಿತ್ತು. ಆದರೆ, ಸದರಿ ನಗರಸಭೆಯವರು ನಿವೇಶನಕ್ಕೆ ನೀಡಿರುವ ಕಟ್ಟಡ ಪರವಾನಗೆಯನ್ನು ರದ್ದು ಪಡಿಸಿರುವ ಬಗ್ಗೆ ಯಾವುದೇ ಮಾಹಿತಿಯನ್ನು ತಮ್ಮ ಕಛೇರಿಗೆ ಪೂರೈಸಿರುವುದಿಲ್ಲ. ಆದ್ದರಿಂದ ಶ್ರೀ ಮಹೇಶ್ ಪಾಂಡುರಂಗ ದಳವಿ ಇವರು ಸ್ಥಳ ಪರಿಶೀಲನಾ ಸಮಯದಲ್ಲಿ ಬೇರೆ ಕಡೆ ಸ್ಥಳವನ್ನು ತೋರಿಸಿ ಮಾಹಿತಿ ನೀಡಿದ ಕಾರಣ ತಪ್ಪಾಗಿ ತಾಂತ್ರಿಕ ಅಭಿಪ್ರಾಯವನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಶ್ರೀ ಮಹೇಶ್ ಮತ್ತು ಉಮೇಶ್ ದಳವಿ ಇವರು ಅನಧೀಕೃತವಾಗಿ ಕಟ್ಟಡ ನಿರ್ಮಾಣ ಮಾಡಿರುವುದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿರುವ ಬಗ್ಗೆ ಪೌರಾಯುಕ್ತರು, ನಗರಸಭೆ, ರಬಕವಿ–ಬನಹಟ್ಟಿ ಇವರು ತಿಳಿಸಿರುವ ಹಿನ್ನೆಲೆಯಲ್ಲಿ, ಅದರಂತೆ, ಸದರಿ ಅನಧೀಕೃತ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಕಾನೂನು ರೀತ್ಯ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ **ಅಲ್ಲಿಂದ ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 18/4

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 19/4/17